ಜೆ.ಆರ್.ಆದಿನಾರಾಯಣಮುನಿ ಬೆಂಗಳೂರು

ಮನುಷ್ಯ ಸ್ಮಶಾನಕ್ಕೆ ಭೇಟಿ ಕೊಡಲೇಬೇಕಾ?



ಊಹೂಂ. ದೇಹದಾನ ಮಾಡಿ, ಸತ್ತರೂ ಸ್ಕೆಲಿಟನ್ನಾಗಿ ಮೆಡಿಕಲ್ ಹುಡುಗಿಯರನ್ನು ನೋಡುತ್ತಾ ಕಪಾಟಲ್ಲಿ ಕೂಡಬಹುದು.

ವಿ. ಹೇಮಂತಕುಮಾರ್, ಬೆಂಗಳೂರು

ಆಡಂ ಯಾವ ಜಾತಿ?

ಜಾತಿ ಮೀರಿದವನು; ಜಾತಿಗೆ I care A DAM(n) ಎಂದವನೇ ಆಡಂ.

ರತ್ನಾ ಅಶೋಕ ಗೊರವರ, ಧಾರವಾಡ

ಗಂಡಸರ ಸಂತೋಷ ಮೂರೇ ಪದಗಳಲ್ಲಿ ಹೆಂಡತಿ ತವರಿಗೆ ಹೋದಳು! ಹೆಂಗಸರ ಸಂತೋಷ?

ಎರಡೇ ಪದಗಳಲ್ಲಿ ಬಿದ್ದ ಬುಟ್ಟೀಗೆ!

ಮೇಟಿ ಕೊಟ್ರಪ್ಪ, ಬಸರಕೋಡು

ನಿಮಗೆ ಅತ್ಯಂತ ಕಷ್ಟವಾದ ಪ್ರಶ್ನೆ ಯಾವುದು?




ಹಿಂದೆಂದೋ ಎಲ್ಲೋ ಸಿಕ್ಕವರು ಈಗ ಎದುರು ನಿಂತು 'ನಾನ್ಯಾರ್ರೇಳಿ ನೋಡೋಣ?' ಎನ್ನುವುದು.

ಮುರಳೀಧರ ಕುಲಕರ್ಣಿ, ಬೀದರ್

ನುಡಿದರೆ ಮುತ್ತಿನ ಹಾರದಂತಿರಬೇಕು ಎಂದರು ಬಸವಣ್ಣನವರು. ರಾಜಕಾರಣಿಗಳು ಏನೆನ್ನಬಹುದು?

ನುಡಿದರೆ ಓಟ್‌ಗಳು ಬೀಳುವಂತಿರಬೇಕು; ನುಡಿದರೆ ಮಾಧ್ಯಮವೂ ಒಪ್ಪಿ ಅಹುದಹುದೆನಬೇಕು...

ದೀಪಾ ವಿ. ಮಹಾಲೆ, ಸಾಂಬ್ರಾಣಿ

ಸಮ್ಮಿಶ್ರ ಸರ್ಕಾರವೆಂದರೆ ನೀರಿನ ಮೇಲಿನ ಗುಳ್ಳೆಯಂತೆ. ಯಾಕೆ?

'ಗುಳ್ಳೆ' ನರಿಗಳ ಪ್ರಭಾವ.

ಎಂ.ಎ. ಕುಮಾರ್, ಬೆಂಗಳೂರು

ಹಣ್ಣು ಕೊಡುವ ಮಾವನಿಗೂ, ಹಣ್ಣು ಬಿಡುವ ಮರಕ್ಕೂ ಏನು ವ್ಯತ್ಯಾಸ?

ಮರ ಒಬ್ಬನಿಗೆ ಎಷ್ಟಾದರೂ ಹಣ್ಣು ಕೊಡುವ ಧಾರಾಳಿ; ಮಾವ ಒಂದೇ ಹೆಣ್ಣು ಕೊಡುವ ಜಿಪುಣ.

ಪಿ. ಜಯವಂತ ಪೈ, ಕುಂದಾಪುರ

ಕೆಲವೆಡೆ ಮೋದಕಪ್ರಿಯನಿಗೆ ಮದ್ಯದ ನೈವೇದ್ಯವನ್ನೂ ಮಾಡುತ್ತಾರಂತಲ್ಲಾ...?

ಛೆ! ತಪ್ಪು ಮಾಡುತ್ತಿದ್ದಾರೆ. ಸುತ್ತಲಿನ ದುರ್ನಾತ ತಡೆಯಲು ನೀಡಬೇಕಾದ್ದು ಮದ್ಯವಲ್ಲ, ಕ್ಲೋರೋಫಾರ್ಮ್!

ಎಂ.ಬಿ. ರಂಗಪ್ಪಶೆಟ್ಟಿ, ಮೋಕಾ

ನೀವು ದೆವ್ವ, ಭೂತ, ಬ್ರಹ್ಮರಾಕ್ಷಸರನ್ನು ನೋಡಿದ್ದೀರಾ ರಾಮ್?

ಓ! ಡಿಸೆಂಬರ್ 31ರ ರಾತ್ರಿ ಹತ್ತು ನಿಮಿಷ ಕರೆಂಟು ತೆಗೆದರೆ ಬ್ರಿಗೇಡ್ ರೋಡ್ ಭರ್ತಿ ಇವೇ ಕಾಣುತ್ತವೆ.

ಕುಮಾರ ಚಲವಾದಿ, ಹಾಸನ

ನಿಮ್ಮ ದೃಷ್ಟಿಯಲ್ಲಿ 'ಜಾತಿ' ಎಂದರೆ ಏನು?

ಒಂದು ವೃತ್ತಿಪರ ಗುಂಪಿಗೆ ವಿಶಿಷ್ಟವಾದ 'ಜಾ ಜಾಣ್ಮೆ; ತಿ ತಿಳಿವಳಿಕೆ'!

ಎಂ.ಎಸ್. ಗುರುರಾಜಾಚಾರ್, ಬಳ್ಳಾರಿ

ಹೆಣ್ಣಿಗೆ ಕಟ್ಟುವ ತಾಳಿಗೆ ಮೂರೇ ಗಂಟು. ಯಾಕೆ?

ಇರುವ 3 ವಿಧದ ಗಂಟುಗಳೂ ನಿನಗೇ ಅರ್ಪಣೆ ಎನ್ನಲು ಸ್ವಯಾರ್ಜಿತ, ಪಿತ್ರಾರ್ಜಿತ, ಮಾವಾರ್ಜಿತ!

ಹಾಡ್ಯ ಬ. ಜಯಾನಂದ, ಮೈಸೂರು

ಸರ್ಕಸ್ ಮಾಡಿ ಸದನದೊಳಗೆ ತೂರಿಕೊಂಡವರನ್ನು ಹಿಗ್ಗಾಮಗ್ಗಾ ಝಾಡಿಸುವ ನಿಮ್ಮಂತಹವರನ್ನು ಅಲ್ಲಿಗಟ್ಟಿದರೆ ಏನಾಗಬಹುದು?

ಎಲ್ಲಿಗಟ್ಟಿದರೂ ಆಲ್ರೆಡಿಯನ್‌ದು ಸ್ಥಾನ ಹೊರಗೆ, ಕಾರ್ಯ ಕಳ್ಳರತ್ತ ಬೊಗಳುವಿಕೆಯೇ.

## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ, ಬೆಂಗಳೂರು

ಬಾಲ್ಡಿ ತಲೆಯವರು ಮುಖವನ್ನು ಎಲ್ಲಿಯವರೆಗೂ ತೊಳೆದುಕೊಳ್ಳಬೇಕು?

ಬದುಕಿರುವವರೆಗೂ!

ಟಿ.ಎಂ. ಮಾನಪ್ಪ, ಶಿವಮೊಗ್ಗ

ಮಳೆ ಸುರಿದು ಕಡಿಮೆ ಆದಮೇಲೆ 'ಮಳೆ ನಿಂತಿತು; ಅನ್ನುವುದೇಕೆ?

ನಿಂತಿರುತ್ತದಲ್ಲ ಹಳ್ಳದಲ್ಲಿ, ಕೊಳ್ಳದಲ್ಲಿ, ಪಾಟ್‌ಹೋಲ್‌ನಲ್ಲಿ....

ಪಿ.ಜೆ. ರಾಘವೇಂದ್ರ, ಮೈಸೂರು

ಮೌನಂ ಸಮ್ಮತಿ ಲಕ್ಷಣಂ. ಮೀ ಟೂ?

ಕುಸ್ಮೃತಿ ಪ್ರದರ್ಶನಂ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

ರೆಸಾರ್ಟ್ ರಾಜಕೀಯ ಎಂದರೇನು?




ಕನಿಷ್ಠ ಮಟ್ಟದ ಕತ್ತೆಗಳನ್ನು ಶ್ರೇಷ್ಠ ಕುದುರೆಯ ಬೆಲೆಗೆ ಕೊಳ್ಳುವ ವ್ಯಾಪಾರ ಕ್ರಮ.

ನರಸಿಂಹ ಪೈ, ಹೊನ್ನಾವರ

'ಮೀ ಟೂ' ಆಂದೋಲನ ತಡವಾಗಿ ಬೆಳಕಿಗೆ ಬಂದದ್ದೇಕೆ?

ಮುಜುಗರ, ಲಜ್ಜೆ, ಖಿನ್ನತೆಗಳ ಹೊಂಡದಿಂದ ಮೀಟಿ ಹೊರತೆಗೆಯಲು ಸಮಯ ತೆಗೆದುಕೊಂಡಿತಂತೆ.

ಮಂಜು ಜಿ., ಬಳ್ಳಾರಿ

ನಾವು ಮಲಗಿಕೊಂಡಾಗ ನಮಗೆ ಗೊತ್ತಿಲ್ಲದಂತೆ ಕನಸಿಗೆ ರಂಗು ತುಂಬುವವರು ಯಾರು?

ಸುಪ್ತ ಮನದಲ್ಲಿ ಗುಪ್ತವಾಗಿ ಅಡಗಿ ಕುಳಿತವರು.

■ ರಾಮ್